ಸಿ.ಸಿ.ನಂ.463/2024 ಪಿ.ಡಬ್ಲು-1
*ಅಮೃತಾ ಗಂಡ ದರ್ಶನ್*

ದಿ.23-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು ಶ್ರೀ ಎಮ್.ಕೆ ವಕೀಲರಿಂದ:-</u>**

ನಾನು ಪಿ.ಯು.ಸಿ ಓದಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರುತ್ತದೆ. ದೂರಿನಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೋಲಿಸರು ದೂರಿಗೆ ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಮದುವೆ ಪೋಟೋಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ಪೋಟೋಗಳನ್ನು ನಿ.ಡಿ-1 ಮತ್ತು 2 ಎಂದು ಗುರುತಿಸಲಾಯಿತು. ನಮ್ಮ ಮದುವೆಯ ಪೋಟೋದಲ್ಲಿ ನಮ್ಮ ತಂದೆ ವೆಂಕಟೇಶ, ತಾಯಿ ರೇಣುಕಾ, ಸತ್ಯಮ್ಮ, 1 ಮತ್ತು ೯ನೇ ಆರೋಪಿತರು, ಉಳಿದ ನಮ್ಮ ಸಂಬಂಧಿಕರು ಇರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಇದೇ ನ್ಯಾಯಾಲಯದಲ್ಲಿ ನನ್ನ ಗಂಡ ಎರಡನೇಯ ಮದುವೆ ಮಾಡಿಕೊಳ್ಳಬಾರದು ಎಂದು ದಾವೆ ಹಾಕಿರುತ್ತೇನೆ ಎಂದರೆ ಸರಿ. ಓ.ಎಸ್.ನಂ.185/2023 ಇದೆ ಎಂದರೆ ಸರಿ. ಸದರಿ ವಾದ ಪತ್ರದ ದೃಡಿಕೃತ ನಕಲನ್ನು ನಿ.ಡಿ-3 ಎಂದು ಗುರುತಿಸಲಾಯಿತು. ಅದೇ ರೀತಿ ನಾನು ಜೀವನಾಂಶಕ್ಕೆ ಕೇಸು ಹಾಕಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯ ದೃಡಿಕೃತ ನಕಲನ್ನು ನಿ.ಡಿ-4 ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.